5th AKKA World Kannada Conference Hosted by Vidyaranya Kannada Kuta
Chicago - Illinois
August 29, 30 & 31 - 2008

www.akkaonline.org
Tax ID: 59-3527607

ವಿದ್ಯಾರಣ್ಯ ಆಶ್ರಯದಲ್ಲಿ ೫ನೇ
ಅಕ್ಕ ವಿಶ್ವ ಕನ್ನಡ ಸಮ್ಮೇಳನ
ಶಿಕಾಗೊ – ಇಲಿನಾಯ್
ಆಗಸ್ಟ್ ೨೯, ೩೦, ೩೧–೨೦೦೮

Showcasing the Talents & Heritage of World Kannadigas

ವಿಶ್ವ ಕನ್ನಡಿಗರ ಪ್ರತಿಭೆ ಮತ್ತು ಪರಂಪರೆಯ ಪ್ರದರ್ಶನ


*Conference Conveners:*
**Vasanthi Gowda - 630-963-0923**
**Mokshagundam Jayaram - 630-690-6162**
**Shivamurthy Keelara - 847-658-8967**

*Conference Secretary:*
Vijaya Bhat - 630-986-5427
*Conference Jt. Secretary:*
Renu Nagaraj - 630-455-1972

*Conference Treasurer:*
Kajekar Ramachandra - 847-438-3550
*Conference Jt. Treasurer:*
Shrishail Virupannavar - 630- 527-1271

*AKKA President:*
Ramesh Gowda – 248-377-2727

*AKKA BOT Chairperson:*
Amarnath Gowda – 248-682-4872

*VKK President:*
Jagannath Nayak– 708-345-5535


**ಪತ್ರಿಕಾ ಪ್ರಕಟನೆ – ಅಕ್ಕ ವಿಶ್ವ ಕನ್ನಡ ಸಮ್ಮೇಳನ ೨೦೦೮**
**ಜೂನ್ ೩, ೨೦೦೮**

ಅಕ್ಕ ಸಂಸ್ಥೆಯ 5ನೇ ವಿಶ್ವ ಕನ್ನಡ ಸಮ್ಮೇಳನವನ್ನು ಈ ವರ್ಷದ ಆಗಸ್ಟ್ 29, 30 ಮತ್ತು 31ರಂದು ಶಿಕಾಗೋದ ರೋಸ್‌ಮಾಂಟ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬಹಳ ವಿಜೃಂಭಣೆಯಿಂದ ನಡೆಸಲು ಎಲ್ಲಾ ರೀತಿಯ ಏರ್ಪಾಡುಗಳನ್ನು ಮಾಡಲಾಗುತ್ತಿದೆ. ಈ ಸಮ್ಮೇಳನವು ಶಿಕಾಗೋದ ವಿದ್ಯಾರಣ್ಯ ಕೂಟದ ಆಶ್ರಯದಲ್ಲಿ ನಡೆಯಲಿದೆ. ವಿದ್ಯಾರಣ್ಯ ಕೂಟ ಅಮೆರಿಕಾದಲ್ಲಿ ಪ್ರಾರಂಭವಾದ ಹಿರಿಯ ಕನ್ನಡ ಕೂಟಗಳಲ್ಲೊಂದಾಗಿದ್ದು, ಈ ಸಮ್ಮೇಳನದಲ್ಲಿ ವಿಶ್ವ ಕನ್ನಡಿಗರ ಪ್ರತಿಭೆ ಮತ್ತು ಪರಂಪರೆಯ ಪ್ರದರ್ಶನದ ಸಲುವಾಗಿ ಎಲ್ಲಾ ರೀತಿಯ ಏರ್ಪಾಡುಗಳನ್ನು ಮಾಡುತ್ತಿದೆ.

ಶಿಕಾಗೊ ನಗರ ಅಮೆರಿಕಾದ 3ನೇಯ ದೊಡ್ಡ ನಗರ ಮತ್ತು ಇಲ್ಲಿ ಹೆಸರುವಾಸಿಯಾದ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಉದಾಹರಣೆಗೆ – ಸಿಯರ್ಸ್ ಟವರ್, ನೇವಿ ಪಿಯರ್, ಲೇಕ್ ಮಿಶಿಗನ್ ಕ್ರೂಸ್, ವಿವಿಧ ರೀತಿಯ ಪ್ರದರ್ಶನಾಲಯಗಳು (ಮ್ಯೂಸಿಯಂಗಳು), ಪ್ಲಾನಟೇರಿಯಂ, ಅಕ್ವೇರಿಯಮ್ – ಇತ್ಯಾದಿ ಸ್ಥಳಗಳಿಗೆ ಶಿಕಾಗೊ ಮನೆಯಾಗಿದೆ. ಜೊತೆಗೆ ಹೆಸರುವಾಸಿಯಾದ ಅನೇಕ ದೇವಸ್ಥಾನಗಳೂ ಶಿಕಾಗೊ ಪರಿಸರದಲ್ಲಿವೆ. ಸ್ವಾಮಿ ವಿವೇಕಾನಂದ ಅವರು ನೀಡಿದ ಜಗತ್ಪ್ರಸಿದ್ದ ಭಾಷಣದ ಸ್ಥಳ ಶಿಕಾಗೊ (Parliament of Religion in 1893). ರೋಸ್‌ಮಾಂಟ್ ಕನ್ವೆನ್ಷನ್ ಸೆಂಟರ್ ಶಿಕಾಗೋದ ಒಹೇರ್ ವಿಮಾನ ನಿಲ್ದಾಣಕ್ಕೆ ಬಹಳ ಹತ್ತಿರದಲ್ಲಿದೆ ಹಾಗೂ ಅಮೆರಿಕಾದಲ್ಲಿ ಹೆಸರುವಾಸಿಯಾದ ಕನ್ವೆನ್ಷನ್ ಸೆಂಟರ್‌ಗಳಲ್ಲಿ ಇದೂ ಒಂದು. ಶಿಕಾಗೋ ಹತ್ತಿರದ ಡೆಟ್ರಾಯ್ಟ್, ಮಿಲ್ವಾಕಿ, ಪಿಯೋರಿಯ, ಇಂಡಿಯಾನಪೊಲಿಸ್, ಸೈನ್ಟ್ ಲೂಯಿಸ್, ಕೊಲಂಬಸ್, ಮಿನಿಯಾಪೊಲಿಸ್, ಇತ್ಯಾದಿ ನಗರಗಳಲ್ಲಿ ಕನ್ನಡ ಕೂಟಗಳಿದ್ದು ಅಲ್ಲೆಲ್ಲಾ ಬಹಳ ಮಂದಿ ಕನ್ನಡಿಗರಿದ್ದಾರೆ. ಅವರು ಈ ಸಮ್ಮೇಳನಕ್ಕೆ ವಿಮಾನದ ಬದಲು ತಮ್ಮ ವಾಹನಗಳ ಮೂಲಕವೇ ಬರುವ ಅನುಕೂಲವಿದೆ. ಈ ಎಲ್ಲಾ ಅನುಕೂಲತೆಗಳಿರುವುದರಿಂದ, ಈ ವರ್ಷದ ಸಮ್ಮೇಳನಕ್ಕೆ ಅಮೆರಿಕ ಮತ್ತು ಪ್ರಪಂಚದ ಎಲ್ಲಾ ಕಡೆಗಳಿಂದಲೂ ಹೆಚ್ಚು ಸಂಖ್ಯೆಯಲ್ಲಿ ಕನ್ನಡಿಗರು ಬರಲಿದ್ದಾರೆ.

ಈ ಸಮ್ಮೇಳನದ ಕಾರ್ಯಕ್ರಮಗಳು ಸಂಚಾಲಕರುಗಳಾದ ವಾಸಂತಿ ಗೌಡ, ಮೋಕ್ಷಗುಂಡಮ್ ಜಯರಾಮ್ ಮತ್ತು ಶಿವಮೂರ್ತಿ ಕೀಲಾರ ಅವರ ನೇತೃತ್ವದಲ್ಲಿ ನಡೆಯಲಿದ್ದು ಅವರಿಗೆ ಸುಮಾರು ೩೫ ಸಮಿತಿಗಳು ಹಾಗೂ ಈ ಸಮಿತಿಗಳಲ್ಲಿರುವ ೨೦೦ ಕ್ಕಿಂತಲೂ ಹೆಚ್ಚು ಸದಸ್ಯರು ಸಹಾಯ ಮಾಡುತ್ತಿದ್ದಾರೆ. ಈ ಸಮ್ಮೇಳನವನ್ನು ವಿಶಿಷ್ಟ ರೀತಿಯಲ್ಲಿ ನಿರೂಪಿಸಲು ವಿಭಿನ್ನ ರೀತಿಯ ವಾತಾವರಣ ಏರ್ಪಡಿಸುವುದರ ಜೊತೆಗೆ ವಿಶೇಷ ರೀತಿಯಲ್ಲಿ ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ:

- ಸಮ್ಮೇಳನ ಸ್ಥಳವನ್ನು ಕರ್ನಾಟಕವನ್ನು ಪ್ರತಿಬಿಂಬಿಸುವಂತೆ ವಿಶೇಷ ರೀತಿಯಲ್ಲಿ ಅಲಂಕಾರ ಮಾಡಲಾಗುವುದು.
- ಆಯೋಜಿಸಲಾಗಿರುವ "ಕರ್ನಾಟಕದ ಬೆಳವಣಿಗೆ" ಅಂಗವಾಗಿ ಕರ್ನಾಟಕದ ೧೦೦೦ ವರ್ಷಗಳಿಗಿಂತ ಹೆಚ್ಚಾದ ಸಂಸ್ಕೃತಿ ಮತ್ತು ಪರಂಪರೆಯ ಜೊತೆಗೆ ಇತ್ತೀಚೆಗೆ ಬಂದಿರುವ ಹಾಗೂ ಇನ್ನೂ ಬರುತ್ತಿರುವ ಸಿಲಿಕಾನ್ ವ್ಯಾಲಿ ಎಂದು ಹೆಸರಾದ ಬೆಂಗಳೂರಿನ ತಾಂತ್ರಿಕ ಬೆಳವಣಿಗೆಗಳ ಪ್ರದರ್ಶನ.
- ಸಿ. ಅಶ್ವಥ್ ಅವರ ತಂಡದ ಹೆಸರುವಾಸಿಯಾದ "ಕನ್ನಡವೇ ಸತ್ಯ" ಸುಗಮ ಸಂಗೀತ ಕಾರ್ಯಕ್ರಮ.
- ಸಿನೆಮಾ ನಟ/ನಟಿಯರು ಮತ್ತು ಹಿನ್ನೆಲೆ ಗಾಯಕ/ಗಾಯಕಿಯರನ್ನೊಳಗೊಂಡ "ಫಿಲ್ಮ್ ನೈಟ್". ಇದರಲ್ಲಿ ಸಂಗೀತ ನಿರ್ದೇಶಕ ಗುರು ಕಿರಣ್

ಅವರ ಜೊತೆಗೆ ಪುನೀತ್ ಕುಮಾರ್, ರಮೇಶ್ ಅರವಿಂದ್, ಉಪೇಂದ್ರ, ನಂದಿತ ಮತ್ತು ಚೈತ್ರ ಅವರ ಜೊತೆಗೆ ಇನ್ನೂ ಹಲವಾರು ಕಲಾವಿದರು ಭಾಗವಹಿಸುವರು.

- ರಾಜಶೇಕರ್ ಅವರ "ಹೊನ್ನಾರು ಜನಪದ ಗಾಯಕರು" ಗುಂಪಿನ "ಜನಪದ ಸಂಗೀತ".
- ಗಣೇಶ್ ಕುದ್ರೋಳಿ ಅವರ "ಮ್ಯಾಜಿಕ್ ಷೊ".
- ಜೀವನಪರ್ಯಂತ ದುಡಿದು ಇಡೀ ಭಾರತ ದೇಶವೇ ಹೆಮ್ಮೆಪಡುವಂತಹ ಸಾಧನೆಗಳಿಗೆ ಭಾಗಿಯಾಗಿರುವ ಯಶಸ್ವಿ ಕನ್ನಡಿಗರಿಗೆ ಪ್ರಶಸ್ತಿ ನೀಡಿ ಸನ್ಮಾನಮಾಡಲಾಗುವುದು.
- ಸಭಿಕರಿಂದ ಚುನಾಯಿಸಲಾಗುವ "ಅಕ್ಕ ಐಡಲ್".
- "ರೇಡಿಯೋ ಕಾರ್ಯಕ್ರಮ".

ಮೇಲೆ ತಿಳಿಸಿರುವ ಕಾರ್ಯಕ್ರಮಗಳ ಜೊತೆಗೆ, ಕರ್ನಾಟಕ ಮತ್ತು ಅಮೆರಿಕಾದಲ್ಲಿರುವ ಕನ್ನಡ ಕಲಾವಿದರಿಂದ ಇನ್ನೂ ಅನೇಕ ವಿವಿಧ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಲಾಗುತ್ತಿದೆ. ಅವುಗಳಲ್ಲಿ ಕೆಲವು ಯಾವುದೆಂದರೆ;

- ನಾಗಾಭರಣ ಅವರ ಗುಂಪಿನ "ಜೋಕುಮಾರ ಸ್ವಾಮಿ" ನಾಟಕ.
- ಮೈಸೂರ್ ನಾಗರಾಜ್ ಮತ್ತು ಮಂಜುನಾಥ್ ಅವರ "ಶಾಸ್ತ್ರೀಯ ಸಂಗೀತ".
- ಚಂದ್ರಶೇಕರ ಕಂಬಾರ, ಎಸ್.ಎಲ್. ಭೈರಪ್ಪ, ಜಯಂತ್ ಕೈಕಿಣಿ ಮತ್ತು ರಾಜಶೇಕರ್ ಅವರ "ಸಾಹಿತ್ಯ ಕಾರ್ಯಕ್ರಮ".
- ಕೃಷ್ಣೇ ಗೌಡ, ಗುಂಡೂ ರಾವ್ ಮತ್ತು ಪ್ರಾಣೇಶ್ (ಬೀಚಿ) ಅವರ "ಹಾಸ್ಯ ಲೋಕ".
- ಸ್ವಾಮಿ ಶ್ರೀ ಸುಖಬೋದಾನಂದ ಮತ್ತು ತುಮಕೂರು ಸ್ವಾಮಿಗಳ ಕಾರ್ಯಕ್ರಮಗಳು.
- ಓಂಕಾರ್ ಅವರ "ಯೋಗ ಕಾರ್ಯಕ್ರಮ".

ಇದರ ಜೊತೆಗೆ ಧರ್ಮಾರ್ಥ, ವಾಣಿಜ್ಯ, ವೈದ್ಯಕೀಯ, ಸಾಹಿತ್ಯ, ಮಹಿಳಾ ಮತ್ತು ಯುವ ಸಮಿತಿಯ ಕಾರ್ಯಕರ್ತರು ವಿಚಾರವೇದಿಕೆಗಳನ್ನು ಏರ್ಪಡಿಸುತ್ತಿದ್ದಾರೆ. ಈಗಾಗಲೇ ಕರ್ನಾಟಕ ಮಾಜಿ ಮುಖ್ಯ ಮಂತ್ರಿ ವೀರಪ್ಪ ಮೊಯ್ಲಿ ಮತ್ತು ಹೆಸರುವಾಸಿಯಾದ ಶ್ಯಾಮ್ ಪಿಟ್ರೋಡ ಅವರುಗಳು ಈ ಸಮ್ಮೇಳನದಲ್ಲಿ ಭಾಗವಹಿಸಲು ಒಪ್ಪಿಗೊಂಡಿದ್ದಾರೆ.

ಉತ್ತಮ ಕಾರ್ಯಕ್ರಮಗಳ ಜೊತೆಗೆ ರುಚಿ ರುಚಿಯಾದ ತಿಂಡಿ ಮತ್ತು ಊಟ ಸಮ್ಮೇಳನದ ಯಶಸ್ವಿಗೆ ಬಹಳ ಮುಖ್ಯ. ಅದಕ್ಕೋಸ್ಕರ ನಮ್ಮ ಕರ್ನಾಟಕದ ಅತ್ಯುತ್ತಮ ವೈವಿಧ್ಯ ಭೋಜನವನ್ನು ನಮ್ಮ ಸ್ಥಳೀಯ ಕನ್ನಡಿಗರ ಪರಿವೀಕ್ಷಣೆಯಲ್ಲಿ ತಯಾರಿಸುವ ಏರ್ಪಾಡು ಮಾಡಲಾಗಿದೆ.

ಒಟ್ಟಾರೆ ಹೇಳುವುದಾದರೆ, ಈ ವರ್ಷದ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ವಿಶ್ವ ಕನ್ನಡಿಗರ ಪ್ರತಿಭೆ ಮತ್ತು ಪರಂಪರೆಯನ್ನು ವಿಜ್ರುಂಭಣೆಯಿಂದ ಪ್ರತಿಬಿಂಬಿಸಿ, ಎಲ್ಲರ ಮನಸ್ಸಿಗೆ ಸಂತೋಷ ತರುವ ಸಲುವಾಗಿ ಎಲ್ಲಾ ವಿಧದ ಏರ್ಪಾಡುಗಳನ್ನೂ ಮಾಡಲಾಗುತ್ತಿದೆ.